ಇದ್ದನಲ್ಲ... ಶಿಕ್ಷೆ ಮುಗಿಸಿ ಹೊರಬಂದು ಕೊಂಡಯ್ಯ ಅನ್ನೋ ಹೆಸರಿನಲ್ಲಿ ಹೊಸ ವ್ಯವಹಾರ ಮಾಡುತ್ತಿರಬಹುದೇ? ಉಳಿದವರಿಗೆ ನಾರಾಯಣ ಗೊತ್ತಿಲ್ಲ. ಫೋಟೊದಲ್ಲಿ ಇರೋನು ಕೊಂಡಯ್ಯ ಅಂತಲೇ ಅಂದುಕೊಂಡಿದ್ದಾರೆ. ಈ ನಾರಾಯಣ ಆಲಿಯಾಸ್ ಕೊಂಡಯ್ಯ, ಪೆದ್ದಾಯನನ ನೆಂಟನೊ ಅಥವಾ ಬಂಟನೊ ಅನ್ನೋ ಅನುಮಾನ ವೆಂಕಟಗಿರಿಗೆ.

ಫೋಟೊ ಜೇಬಿನಲ್ಲಿದೆ. ಈ ಹುಡುಗರಿಗೆ ತೋರಿಸಿದರೆ ಗೊತ್ತಾಗಬಹುದು ಆದರೆ ಫೋಟೊ ಯಾರಿಗೂ ತೋರಿಸಬೇಡಿ ಅಂತ ಪೆದ್ದಾಯನ ಹೇಳಿದ್ದು ನೆನಪಾಗಿ ಸುಮ್ಮನಾದ.

ಸ್ಟೌ ಮೇಲಿದ್ದ ಪಾತ್ರೆಯಲ್ಲಿ ಕುದಿಯುತ್ತಿರುವ ಟೀ ಉಕ್ಕಿ ಕೆಳಕ್ಕೆ ಬೀಳದಂತೆ ನೋಡಿಕೊಳ್ಳುವುದರಲ್ಲಿ ಮಗ್ನನಾಗಿರುವಂತೆ ನಟಿಸುತ್ತಲೇ ಅಂಗಡಿಯವನು ತಮ್ಮನ್ನು ಗಮನಿಸುತ್ತಿದ್ದಾನೆ ಅನ್ನುವುದು ವೆಂಕಟಗಿರಿಗೆ ಗೊತ್ತಾಯಿತು. ಬೆಂಚಿನ ಮೇಲೆ ಕೂತದ್ದಕ್ಕೆ ಅವನ ಆಕ್ಷೇಪ ಇರಬಹುದೇ ಅನ್ನಿಸಿ ಅವನ ಕಡೆಗೆ ನೋಡುತ್ತ ಅನ್ನಾ ನಾಲ್ಕು ಟೀ, ರೊಂಡು ಗ್ಲಾಸ್ ಎನ್ನುತ್ತ ಬೆರಳು ಎತ್ತಿ ತೋರಿಸಿದ. ಅಂಗಡಿಯವನಿಗೆ ಸಮಾಧಾನ ಆದಂತೆ ಕಾಣಿಸಿತು. ಕೊಡುತ್ತೇನೆ ಅನ್ನುವಂತೆ ಅವನು ಒಮ್ಮೆ ಕಣ್ಣುಮುಚ್ಚಿ ತಲೆಯಾಡಿಸಿದ. ಇನ್ನು ಸ್ವಲ್ಪ ಹೊತ್ತು ಅಂಗಡಿ ಮುಂದೆ ಕೂತಿರಲು ಅವನ ತಕರಾರು ಇಲ್ಲವೆನ್ನಿಸಿ ನಿರಾಳನಾದ.

ಪೊಲೀಸರ ಕಣ್ಣಿಗೆ ಬೀಳದಂತೆ ಕೆಲಸ ಮಾಡಬೇಕು ಅಂದರೆ ಇಲ್ಲೂ ಯಾರದ್ದಾದರೂ ಕೊಲೆ ಅಥವಾ ದೋಪಿಡಿ ಮಾಡಲು ಕೊಂಡಯ್ಯನಿಗೆ ಸಹಾಯ ಮಾಡಲು ಪೆದ್ದಾಯನ ನಮ್ಮನ್ನು ಕಳಿಸಿರಬಹುದೇ ಅಂತ ವೆಂಕಟಗಿರಿ ಕಡಪಾದಿಂದ ಹೊರಟಾಗಿನಿಂದ ಯೋಚಿಸುತ್ತಲೇ ಇದ್ದ. ಇಲ್ಲಿ ಅಂಥದ್ದೇನಾದರೂ ಮಾಡಿದರೆ ಪೊಲಿಸರಿಗೆ ಸಿಕ್ಕಿಬೀಳುವುದು ಗ್ಯಾರಂಟಿ. ಆ ಮೇಲೆ ಕೋರ್ಟು, ಜೈಲು ಎಲ್ಲಾ ಮುಗಿಯೋ ಹೊತ್ತಿಗೆ ಆಯಸ್ಸೇ ಮುಗಿದಿರುತ್ತೆ ಅಂದುಕೊಂಡ. ಹೊರಡುವ ಮೊದಲೇ ಏನು ಕೆಲಸ ಅಂತ ಪೆದ್ದಾಯನನ್ನು ಸ್ಪಷ್ಟವಾಗಿ ಕೇಳಬೇಕಿತ್ತು ಅಂತ ಪೇಚಾಡಿಕೊಳ್ಳುತ್ತಲೇ ಇದ್ದಾನೆ. ಕೊಂಡಯ್ಯ ಪೊಲೀಸರಿಗೆ ಬೇಕಾದವನಾಗಿದ್ದರೆ ಅವನ ಜತೆಗೆ ಪೊಲೀಸರು ನಮ್ಮನ್ನೂ ಯಾವುದಾದರೂ ಕೇಸಿನಲ್ಲಿ ಫಿಟ್ ಮಾಡೇ ಮಾಡುತ್ತಾರೆ ಅನ್ನಿಸಿ ಭಯವಾಯಿತು.

ಸುಮ್ಮನೆ ಊರಲ್ಲಿ ಅಲೆಯುತ್ತಿದ್ದರೆ ಪೊಲೀಸರ ಕಣ್ಣಿಗೆ ಬಿದ್ದೇ ಬೀಳುತ್ತೇವೆ. ಮಷ್ಟಿಯಲ್ಲಿರೊ ಪೊಲೀಸರ ಕಣ್ಣಿಗೆ ಮೊದಲು ಬೀಳೋದು ನಮ್ಮಂತವರೇ ಅನ್ನೋದು ವೆಂಕಟಗಿರಿ ಚೆನ್ನಾಗಿ ಗೊತ್ತಿದೆ. ಪೊಲೀಸರು ಸ್ಟೇಷನ್ನಿಗೆ ಎಳೆದೊಯ್ದು ವಿಚಾರಿಸುವ ಸಂದರ್ಭ ಬಂದರೆ ಏನು ಹೇಳಬೇಕು ಅನ್ನೋದನ್ನು ಎಲ್ಲರೂ ಮೊದಲೇ ತೀರ್ಮಾನಿಸಿದ್ದರು.

ನಮ್ಮ ಹುಡುಗನೊಬ್ಬ ಮನೆ ಬಿಟ್ಟು ಬಂದಿದ್ದಾನೆ. ಅವನು ಇಲ್ಲೇ ಎಲ್ಲೋ ಇದ್ದಾನೆ ಅನ್ನೋ ಖಬರು ಬಂತು. ಅವನನ್ನು ಹುಡುಕೋಕೆ ಬಂದಿದ್ದೀವಿ. ಅವನ ಹೆಸರು ವೆಂಕಟರಮಣ. ರಮಣ ಅಂತಲೂ ಕರೀತೀವಿ... ನಮ್ಮದು ಆಲೂರು ಅಂತ ಹೇಳಿಬಿಡೋಣ. ಸಾಯಿಲಕ್ಷ್ಮಿಯನ್ನು ತೋರಿಸಿ ಇವಳು ಹುಡುಗನ ತಾಯಿ ಅನ್ನೋಣ... ಅನುಮಾನ ಬರದ ಹಾಗೆ. ಎಲ್ಲರೂ ಒಂದೇ ಉತ್ತರ ಹೇಳಬೇಕು ಅಂತ ನಿರ್ಧರಿಸಿದ್ದರು.

ಪೊಲೀಸರು ಒಂದೇ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳುತ್ತಾರೆ. ಒಬ್ಬೊಬ್ಬರು ಒಂದೊಂದು ಉತ್ತರ ಹೇಳಿದರೆ ಒದ್ದು ಒಳಕ್ಕೆ ತಳ್ಳುತ್ತಾರೆ. ಏಲೇ ಆಗದ ದೊಂಗಲು, ದೋಪಿಡಿಗಳನ್ನೆಲ್ಲ ನಮ್ಮ ತಲೆಗೆ ಕಟ್ಟಿ ಜೈಲಿಗೂ ಕಳಿಸಬಹುದು ಅನ್ನೋ ಭಯ ವೆಂಕಟಗಿರಿ ಇತ್ತು. ಹತ್ತು ವರ್ಷಗಳ ಹಿಂದೆ ಚಿತ್ತೂರಿನಲ್ಲಿ ಸುಳ್ಳು ಕೇಸೊಂದರಲ್ಲಿ ಸಿಕ್ಕಿಕೊಂಡು ಐದು ವರ್ಷ ಶಿಕ್ಷೆ ಅನುಭವಿಸಿ ಬಂದಿದ್ದ.

ಎದುರು ಬೆಂಚಿನ ತುದಿಯಲ್ಲಿ ಕೂತಿದ್ದ ಸಾಯಿಲಕ್ಷ್ಮಿ ತೀರಾ ಬಸವಳಿದವಳಂತೆ ಕಾಣಿಸಿದಳು. ಅವಳು ಮುತ್ಯಾಲನ ಹೆಂಡತಿ ಇರಬಹುದು ಅನ್ನೋ ಅನುಮಾನ ವೆಂಕಟಗಿರಿಗೆ. ಲಕ್ಷ್ಮಿ ನನ್ನ ತಂಗಿ